

# ತೆಂಗೋಪಾಖ್ಯಾನ

'ನಮ್ಮೂರಿನ್ ತೆಂಗು, ಅದ್ರ ಖ್ಯಾತಿ ವಿಶ್ವವಿಖ್ಯಾತ. ಜಗತ್ತಿನ್ ಯಾವ್ದೆ ತೆಂಗಿಗೂ ಇಲ್ಲಿಯಷ್ಟು ರುಚಿ ಬರಾಕಿಲ್ಲ ಅಂತ ಜಂಬ ಹೊಡ್ಕೊಂಡು ತಿರ್ಗೋದ್ರಲ್ಲಿ ನಾವ್ ಎತ್ತಿದ್ ಕೈ' ಎನ್ನುವುದು ಬಯಲುಸೀಮೆ ಅರಸೀಕೆರೆಯವರ ಮಾತು. ಇಲ್ಲಿನ ನೆಲದ ಗುಣ, ಜಲದ ಆರೈಕೆಯಿಂದ ನಳನಳಿಸುವ ಕಲ್ಪತರು ನಾಡಿನ ಭಾಷೆಯ ವರಸೆ ಈ ಬಾರಿಯ 'ಚೆನ್ನುಡಿ'ಯಲ್ಲಿ...

■ ಮಮತಾ ಅರಸೀಕೆರೆ

## ಕಲ್ಪತರು ನಾಡಿನ ಭಾಷಾ ಕಂಪು

ನಮ್ಮ ಊರಿನ್ ಬಗ್ಗೆ ಮಾತಾಡ್ಬೇಕು ಅಂದ್ರೆ ಮೊದ್ಲು ನೆಪ್ಪಿಗ್ ಬರೋದು ಅರಸೀ ಸಂಸ್ಥಾನದ ಕತೆ, ಮತ್ತೆ ಕಣ್ಮುಂದೆ ಹರ್ದಾಡೋದು ಇಡೀ ತಾಲೂಕಲ್ಲಿ ಹೊಲಗಳ ಪಕ್ಕಪಕ್ದಲ್ಲಿ ನೀಟ್ಟಾಗಿ ಜೋಡಿಸ್ದಂತೆ ನಿಂತಿರೋ ತೆಂಗಿನ ಮರ್ಗಳ ಸಾಲ್ಸಾಲು.

ನಮ್ಮೂರೂ ಸೇರ್ದಂತೆ ಪಕ್ಕದ್ ತಿಪ್ಟೂರು, ತುಮ್ಕೂರು ಎಲ್ಲಾ ಕಲ್ಪತ್ರು ನಾಡು. ಅದ್ಭುತ ಅನ್ನೊ ತೆಂಗಿನ್ ನೀರು ಅಂದ್ರೆ ಎಳ್ನೀರು, ತೆಂಗಿನ್ ತಿರ್ಳು, ಬಲಿತ್ ಮೇಲೆ ತುರಿದ್ರೆ ಸಖತ್ ರುಚಿಯ ಕಾಯ್ ತುರಿ. ಇಲ್ಲಿನ್ ಮನೆಗಳಲ್ಲಿ ಅಡುಗೆ ಕೋಣೆ ಹೊಕ್ರೆ ಏನ್ ಇರುತ್ತೊ ಇಲ್ವೊ, ತೆಂಗು ಇಲ್ದಿದ್ರೆ ಅಡ್ಗೇನೆ ಇಲ್ಲ ಅನ್ನೋವಷ್ಟು ಡಿಪೆಂಡ್ ಆಗಿರೋದು ತೆಂಗಿನ್ ಮೇಲೇನೆ. ನಮ್ಮೂರಿನ್ ತೆಂಗು, ಅದ್ರ ಖ್ಯಾತಿ ವಿಶ್ವವಿಖ್ಯಾತ. ಜಗತ್ತಿನ್ ಯಾವ್ದೆ ತೆಂಗಿಗೂ ಇಲ್ಲಿಯಷ್ಟು ರುಚಿ ಬರಾಕಿಲ್ಲ ಅಂತ ಜಂಬ ಹೊಡ್ಕೊಂಡು ತಿರ್ಗೋದ್ರಲ್ಲಿ ನಾವ್ ಎತ್ತಿದ್ ಕೈ. ಅದು ಕೆಲ ಮಟ್ಟಿಗೆ ನಿಜ ಕೂಡ ಅನ್ನಿ ಮತೆ. ಇಲ್ಲಿನ್ ನೆಲದ್ ಗುಣ, ಜಲದ ಆರೈಕೆ ಹಂಗಿರ್ತತೆ. ಇಲ್ಲಿ ಕಡೆ ಹಣಕಾಸಿನ್ ಮೂಲ ಕೂಡ ಬಹುತೇಕ ತೆಂಗೇ ಆದ್ರಿಂದ, ಇಡೀ ಮರದ್ ಉಪ್ಯೋಗ ಬಹಳಷ್ಟೀರೋದ್ರಿಂದ ಕಲ್ಪವೃಕ್ಷ ಅನ್ನಿಸ್ಕೋಳ್ಳೋದ್ರಲ್ಲಿ ಅತಿಶಯೋಕ್ತಿಯೇನಿಲ್ಲ. ದೇವ್ಲೋಕ್ದಲ್ಲಿ ಇದಕ್ಕೇನು ಕೆಲ್ಸ ಅಂತ ಗೊತ್ತಿಲ್ಲ ಬಿಡಿ ಆದ್ರೆ ನಮ್ ಲೋಕ್ದಲ್ಲಂತೂ ಪವಾಡನೆ ಮಾಡ್ಬಿಟ್ಟಿರೋದಂತೂ ಖರೇನೆ ಖರೆ.

ಇಂತಾ ತೆಂಗಿನ್ ಬೀಡಿಗೆ ಮಳೆಗಾಲ್ದಲ್ಲಿ ಬರ್ಬೇಕು ನೀವು. ಸುಮ್ನೆ ಒಂದ್ ರವುಂಡ್ ಸುತ್ಲಿನ ಹಳ್ಳಿ ಕಡೆ ಹೋದ್ರೋ, ಅಬಬಾ ಏನ್ ಸೊಗ್ಸು ಅಂತೀರಿ. ಯಾವ್ ಮಲೆನಾಡ್ಗೂ ಕಮ್ಮಿ ಇಲ್ಲ ಕಣೇಳಿ. ಸಾಕಷ್ಟು ಬೇರೆ ಬೇರೆ ಮರಗಳಿರ್ತವೆ ಇಲ್ಲಾ ಅನ್ನಾಕಿಲ್ಲ, ಅದಕ್ಕಿನ್ನ ಹೆಚ್ಚು ತೆಂಗಿನ್ ಸಾಲುಗಳು ಮೆರ್ಯೋದಿದ್ಯಲ್ಲ, ಶಿಸ್ತಾಗಿ, ನೇರ್ವಾಗಿ ನಿಂತ್ಕೊಂಡು ಕಣ್ಮನ ಸೆಳಿತಾವಲ್ಲ ಆಗ ಸೊಬಗು ನೋಡ್ಬೇಕು. ಯಾರೋ ಕ್ರಮಬದ್ಧಾಗಿ ಜೋಡಿಸಿಟ್ಟಂಗೆ ಜೋಡಿಸ್ಕೊಂಡು

